

ಜನಜಂಗುಳಿ! ವೇಷ ಕಳಚಿದ ಮೇಲೂ ಅದರದ್ದೇ ಮಾತು.

ಸದಾ ಟೀವಿ ಕೇಳುವ ತಿಪ್ಪಭಟ್ಟರ ಮನೆಯ ಅಜ್ಜಿ, ಅವಳಿಗೆ ಕಣ್ಣು ಮಂದವಾದ್ದರಿಂದ ರೇಡಿಯೋದ ಜಾಗಕ್ಕೆ ಟೀವಿ ಬಂದರೂ ಅವಳದು 'ಕೇಳುವುದು' ಮಾತ್ರ. ಅಂದು ಪ್ರಸಂಗ ಮುಗಿದು ಬೆಳ್ಳಿ ಮೂಡುತ್ತಿದ್ದಂತೆ, ಬಣ್ಣ ಕಳಚಿದ ಅಪ್ಪನೊಟ್ಟಿಗೆ ತಿಪ್ಪಾಭಟ್ಟರ ಮನೆಯ ಹಿತ್ತಿಲು ಹಾದು ಹೋಗುವಾಗ ಅಜ್ಜಿ ರಾಗ ಎಳೆದಿದ್ದಳು, ಎಂತದೋ ಮಾಣಿ ನಿಂಗಳದ್ದೆಂತದೋ ಮತ್ತೆ ಯುದ್ಧವಡಲಾ.

ಕಾರ್ಗಿಲ್ ಯುದ್ಧದ ಘೋಷಣೆಯಾಗಿತ್ತು. ರಿಸರ್ವಿನವರ ತೀರ ಅವಶ್ಯಕತೆಯಿಲ್ಲದಿದ್ದರೂ ಅಪ್ಪ ತಾನೇ ವಿಚಾರಿಸಿಕೊಂಡು, ಬಂದರೆ ಅನುಕೂಲ ಎಂಬಂತ ಭಾವನೆ ಆ ಕಡೆಯಿಂದ ಸಿಕ್ಕಿದ್ದೇ, ಯುದ್ಧಕ್ಕೆ ಹೊರಟು ನಿಂತಿದ್ದ. ಅಡಕೆ ತೋಟದ ಜನಕ್ಕೆ ಅಪರೂಪವಾದ ದಿರಿಸಿನೊಂದಿಗೆ ಹೊರಟು ನಿಂತಿದ್ದ ಯಕ್ಷಗಾನದ ಕೌರವನ ಬೀಳ್ಕೊಡಲು ವನವಾಸಕ್ಕೆ